ನೇತೃತ್ವದಲ್ಲಿ ಶೇಷನಾರಾಯಣರನ್ನು ಸನ್ಮಾನಿಸಿದ್ದು ಒಂದು ವಿಶೇಷ. ಇದಕ್ಕಾಗಿ ಲೇಖಕರನ್ನು 'ವಿಶೇಷ ನಾರಾಯಣ' ಎನ್ನಲೂ ಬಹುದು.

'ಕಾವೇರಿ'ಯ ಬಗ್ಗೆ ಏಕೆ ಇಷ್ಟೊಂದು ವ್ಯಾಮೋಹ ಎಂಬ ಪ್ರಶ್ನೆ ಕೇಳಿದಾಗ 'ಅದು ತೀರ ಸಹಜ. ನನ್ನ ಹುಟ್ಟಿಗೆ ಅವಳ ಒಡನಾಟವೇ ಕಾರಣ' ಎನ್ನುತ್ತ ತಮ್ಮ ತಾಯಿಯ ಹೆಸರು 'ಕಾವೇರಿ' ಎಂದು ನಗುತ್ತಾ ಹೇಳುತ್ತಿದ್ದರು. ಹೇಳಿಕೇಳಿ ತಾವು 'ಶೇಷನಾರಾಯಣ' ಆಗಿದ್ದರಿಂದ ನೀರೇ ನನ್ನ ಉಸಿರು ಎನ್ನುತ್ತಿದ್ದರು. 'ಒಂದುಗೂಡಿದ ನದಿಗಳು' ಎಂಬ ಅವರ ಕಾದಂಬರಿಯೂ ಬಂದಿದೆ.

ವ್ಯವಹಾರದಲ್ಲಿ ಲಾಭ, ಪ್ರಶಸ್ತಿಗಾಗಿ ಲಾಬಿ ಮಾಡಲು ಶೇಷನಾರಾಯಣರಿಗೆ ಸಾಧ್ಯವಾಗದಿದ್ದರೂ ಅವರ ಸಾಧನೆಗೆ ಸಲ್ಲಬೇಕಾದದ್ದು ಸಂದಿದೆ. 'ಬೀಸು' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ತಮಿಳುನಾಡು ಸರ್ಕಾರದ 'ಕುರಳ್ ಪೀಠಂ' ಪ್ರಶಸ್ತಿ ಬಂದಿದೆ. ರಾಜ್ಯೋತ್ಸವ ಪ್ರಶಸ್ತಿ ತಡವಾಗಿ ಬಂದುದಕ್ಕೆ ಅವರಿಗೆ ಬೇಸರವೇನಿರಲಿಲ್ಲ. ಕಾದಂಬರಿಕಾರ ವ್ಯಾಸರಾಯ ಬಲ್ಲಾಳರ ಜೊತೆ ಅದು ಅವರಿಗೂ ಬಂದದ್ದು ಸಂತೋಷವನ್ನೇ ತಂದಿತ್ತು. ತಮಿಳು–ಕನ್ನಡ ಭಾಷೆಯ ಸಂಪರ್ಕ ಸೇತುವೆಯಾಗಿ ದುಡಿದವರಲ್ಲಿ ಬಿ.ಜಿ.ಎಲ್. ಸ್ವಾಮಿ ಹಾಗೂ ಶೇಷನಾರಾಯಣ ಮೊದಲಿಗರು. ಎಸ್.ಎಲ್. ಭೈರಪ್ಪನವರ 'ದಾಟು', 'ಧರ್ಮಶ್ರೀ' ಕಾದಂಬರಿಗಳನ್ನು ತಮಿಳಿಗೆ ತರ್ಜುಮೆ ಮಾಡಿದ್ದಾರೆ ಶೇಷನಾರಾಯಣ. ತಮ್ಮ ಪುಸ್ತಕ 'ಕಾವೇರಿ – ಒಂದು ಚಿಮ್ಮು ಒಂದು ಹೊರಳು' ತಮಿಳಿಗೆ ಅನುವಾದಿಸಿದ್ದಾರೆ. ತಮಿಳು ಕತೆಗಳನ್ನು ಕನ್ನಡಕ್ಕೆ ತಂದಿದ್ದಾರೆ.

ಕತೆ, ಕಾದಂಬರಿಗಳಿಂತ ಹೆಚ್ಚಿನ ಕುತೂಹಲ ಶೇಷನಾರಾಯಣರ ಬದುಕಿನಲ್ಲಿದೆ. ಅವರ ಬದುಕೊಂದು ನಿರಂತರ ಹೋರಾಟವಾಗಿತ್ತು. ತಮ್ಮ ಸಾಧನೆಗೆ ಬೆನ್ನೆಲುಬಾಗಿ ನಿಂತ ಪತ್ನಿ ಸುಭದ್ರ ಹಾಗೂ ನಾಲ್ಕು ಭಾವಮೈದುನರನ್ನು ಕೊಂಡಾಡುತ್ತಾರೆ. ಯಾವ ಮಠಕ್ಕೂ ಹೋಗದ, ಯಾರ ಕಾಲಿಗೂ ಬೀಳದ ಶೇಷನಾರಾಯಣ ತಾವು ರಚಿಸಿದ 'ಅಯೋಧ್ಯೆಯಲ್ಲಿ ರಾಮನಿಲ್ಲ' ಎಂಬ ಪುಸ್ತಕದ ಪ್ರತಿಯನ್ನು ಇಳಕಲ್ಲಿನ ಸ್ವಾಮಿಯವರಿಗೆ ಕೊಡುತ್ತಾರೆ. ಅದಕ್ಕೆ ಕಾರಣ ಆ ಸ್ವಾಮಿಗಳು ಒಬ್ಬ ದಲಿತನನ್ನು ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದ್ದು.

'ಕಾವೇರಿ– ಒಂದು ಚಿಮ್ಮು ಒಂದು ಹೊರಳು' ಪುಸ್ತಕ ಬರೆದ ಮೇಲೆ ಅವರಿಗೆ ಅನೇಕ ಬೆದರಿಕೆ ಕರೆಗಳು ಬರುತ್ತಿದ್ದವು. ಆದರೂ ಧೃತಿಗೆಡದೆ ತಮಗೆ ಅನಿಸಿದ್ದನ್ನು ಧೈರ್ಯವಾಗಿ ಹೇಳುತ್ತಿದ್ದರು. '1924ರಲ್ಲಿ ಕಾವೇರಿ ಒಪ್ಪಂದದ ಅವಧಿ ಮುಗಿದಿದೆ' ಎಂಬ ಹೇಳಿಕೆ ಕೊಟ್ಟ ತಮಿಳುನಾಡಿನ ನಿವೃತ್ತ ರಾಷ್ಟ್ರಾಧ್ಯಕ್ಷರು ಆ ಮಾತನ್ನು ವಾಪಸ್ಸು ಪಡೆಯುವಂತೆ ಮಾಡಿದವರು ಶೇಷನಾರಾಯಣ.

'ಶೇಷ'ವೆಂದರೆ ಉಳಿದದ್ದು, ಕಡಿಮೆ ಎನ್ನುವ ಅರ್ಥದಲ್ಲಿ ಬಳಕೆಯಾಗುತ್ತದೆ. ಆದರೆ ಶೇಷನಾರಾಯಣ ಇಲ್ಲವಾದರೂ ಅವರ ಸಾಹಿತ್ಯ ಉಳಿದಿರುತ್ತದೆ. ಜೀವನದಿ ಕಾವೇರಿಯ ಬಗ್ಗೆ ಅವರು ಕೊಟ್ಟ ವಿಸ್ತಾರವಾದ ಮಾಹಿತಿ ಕಾವೇರಿಯ ಹರಿವು ಇರುವತನಕ ಜನರ ನೆನಪಿನಲ್ಲಿ ಉಳಿದಿರುತ್ತದೆ.


### ಕೃಷ್ಣ ಸುಬ್ಬರಾವ್

ನಿವೃತ್ತ ಬ್ಯಾಂಕ್ ಉದ್ಯೋಗಿ. ಏಳು ಹಾಸ್ಯ ಸಂಕಲನಗಳು, ಒಂದು ಸಣ್ಣಕತೆಗಳ ಸಂಕಲನ ಹಾಗೂ ಏಳು ಪುಸ್ತಕಗಳನ್ನು ಸಂಪಾದಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.